ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು **ಪ್ರಥಮ ದರ್ಜೆಯ ನ್ಯಾಯಿಕ**

**ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1934/2023**

**ಚಾ.ಸಾ. - 1**
**ಪ್ರಾ.ಸಾ. - 1**

**ಸಾಕ್ಷಿದಾರರ ಹೆಸರು** ಃ ಪ್ರೇಮಾ ಕಲ್ಲಪ್ಪ ಮನಗುಳಿ

**ಸಾಕ್ಷಿದಾರರ ವಯಸ್ಸು** ಃ 48 ವರ್ಷ

**ಸಾಕ್ಷಿದಾರರ ಉದ್ಯೋಗ** ಃ ಹಿರಿಯ ಮೇಲ್ವಿಚಾರಕರು, ಶಿಶು ಅಭಿವೃದ್ದಿ ಇಲಾಖೆ

**ಸಾಕ್ಷಿದಾರರ ವಿಳಾಸ** ಃ ದೊಡವಾಡ, ಬೈಲಹೊಂಗಲ

---

**ಪ್ರಮಾಣ ವಚನ ಮಾಡಿದ ದಿನಾಂಕ ಃ 23.06.2025.**

**ಮುಖ್ಯ ವಿಚಾರಣೆಃ ಎಪಿಪಿ ಅವರಿಂದಃ**

ದಿನಾಂಕ **13.07.2023** ರಿಂದ ಇಲ್ಲಿಯವರೆಗೆ ಹಿರಿಯ ಮೇಲ್ವಿಚಾರಕರು, ಶಿಶು ಅಭಿವೃದ್ದಿ ಇಲಾಖೆಯಲ್ಲಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ **05.08.2023** ರಂದು ಮಕ್ಕಳ ಕಲ್ಯಾಣ ಸಮಿತಿ ಬೆಳಗಾವಿ ಇವರಿಂದ ಸಂಗೊಳ್ಳಿ ಗ್ರಾಮದಲ್ಲಿ ಕುಮಾರಿ ಪ್ರಭಾವತಿ ಸುರೇಶ ಸೊಗಲದ ರವರ ಬಾಲ್ಯವಿವಾಹವು ರಮೇಶ ಬಸವರಾಜ ತಳವಾರ ಇವರೊಂದಿಗೆ ಅಗಿರುವುದಾಗಿ ಅದಕ್ಕೆ ಸಂಬಂಧಿಸಿದ ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸುವಂತೆ ಮೌಖಿಕವಾಗಿ ಆದೇಶ ನೀಡಿರುತ್ತಾರೆ. ಅದರಂತೆ ನಾನು ಹಾಗೂ ಚಾಸಾ **5** ರವರು ಸಂಗೋಳ್ಳಿ ಗ್ರಾಮಕ್ಕೆ ಹೋಗಿ **1**ನೇ ಆರೋಪಿಯ ಮನೆಗೆ ಹೋಗಿದ ಆತನನ್ನು, **2** ಮತ್ತು **3**ನೇ ಆರೋಪಿತರನ್ನು ವಿಚಾರಣೆ ಮಾಡಲಾಗಿ ದಿನಾಂಕ **27.02.2023** ರಂದು **1**ನೇ ಆರೋಪಿಯ ಹಾಗೂ ಚಾಸಾ **4** ರವರ ಮದುವೆಯಾಗಿರುವುದನ್ನು ಖಚಿತಪಡಿಸಿರುತ್ತಾರೆ. ನಾನು **4** ಮತ್ತು **5** ನೇ ಆರೋಪಿತರಿಗೂ ಸಹ ಫೋನ್ ಕರೆ ಮಾಡಿ ಕೇಳಿ ಸದರಿ ವಿಷಯವನ್ನು ಖಚಿತಪಡಿಸಿರುತ್ತಾರೆ.

ನಂತರ, ಚಾಸಾ **12** ರವರಿಗೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ದಿನಾಂಕ **08.08.2023** ರಂದು ಆರೋಪಿತರ ವಿರುದ್ದ ದೂರನ್ನು ದಾಖಲಿಸಿರುತ್ತೇನೆ . ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ದೂರಾಗಿದ್ದು, ಸದರಿ ದಾಖಲೆಯನ್ನು ನಿಶಾನೆ ಪಿ **1** ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ **1**ಎ ಎಂದು ಗುರುತಿಸಲಾಯಿತು.

ದಿನಾಂಕ **09.08.2023** ರಂದು ಪೊಲೀಸರು ಬೆಳಿಗ್ಗೆ **09.30** ಗಂಟೆಗೆ ನನಗೆ ಸಂಗೋಳ್ಳಿ ಗ್ರಾಮದಲ್ಲಿ ಆರೋಪಿಯ ಮನೆಯ ಬಳಿ ಪಂಚನಾಮೆಗೆ ಕರೆದಿದ್ದು, ಆ ಕಾಲಕ್ಕೆ ನಾನು ಘಟನಾ ಸ್ಥಳವನ್ನು ತೋರಿಸಿದ್ದ ಮೇರೆಗೆ ಬೆಳ್ಳಿಗ್ಗೆ **09.30**ರಿಂದ **10.30** ರ ವರೆಗೆ ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಪಂಚನಾಮೆಯಾಗಿದ್ದು, ಸದರಿ ದಾಖಲೆಯನ್ನು ನಿಶಾನ ಪಿ **2**ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ **2**ಎ ಎಂದು ಗುರುತಿಸಲಾಯಿತು. ಅದೇ ಕಾಲಕ್ಕೆ **1** ಪೋಟೋವನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಗೆ ಈಗಸದರಿ ಪೋಟೋವನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿರುತ್ತಾರೆ. ಪಂಚಾಮೆಯ ವಿಷಯವಾಗಿ ನಾನು ಪೊಲೀಸರಿಗೆ ಮರುಹೇಳಿಕೆ ನೀಡಿರುತ್ತೇನೆ.

ಅದೇ ಕಾಲಕ್ಕೆ ಹಾಥ ನಕಾಶೆಯನ್ನು ಸಹ ತೆಗೆದಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ಸದರಿ ದಾಖಲೆಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಹಾಥ ನಾಕಾಶೆಯಾಗಿದ್ದು, ಸದರಿ ದಾಖಲೆಯನ್ನು ನಿಶಾನ ಪಿ **3** ಎಂದು ಸಾಕ್ಷಿಯ ಸಹಿಯನ್ನು ನಿಶಾನೆ ಪಿ **3**ಎ ಎಂದು ಗುರುತಿಸಲಾಯಿತು. ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

**ವಾಟೀ ಸವಾಲುಃ 1 ರಿಂದ 3ನೇ ಆರೋಪಿ ಪರ ಶ್ರೀ ಎಸ್ ಸಿ ಪಿ ವಕೀಲರಿಂದಃ ಇಲ್ಲ**

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಶಾನೆ ಪಿ **1** ದೂರನ್ನು ಪೊಲೀಸರು ನಾನು ಕೈಬರಹದಲ್ಲಿ ಬರೆದ ರೀತಿಯಲ್ಲಿಯೇ ಬೆರಳಚ್ಚು ಮಾಡಿರುತ್ತಾರೆ. ನಾನು ಕೈಬರಹದಲ್ಲಿ ನೀಡಿದ ದೂರನ್ನು ಪೊಲೀಸರು ಸ್ವೀಕರಿಸಿರುತ್ತಾರೆ. ದಿನಾಂಕ **08.08.2023** ರಂದು ಸಾಯಂಕಾಲ **05.45** ಗಂಟೆಗೆ ನೀಡಿರುತ್ತೇನೆ. ದೂರನ್ನು ಯಾವ ಪೊಲೀಸ ಸಿಬ್ಬಂಧಿಯು ಬೆರಳಚ್ಚು ಮಾಡಿರುತ್ತಾರೆ ಎಂದು ನನಗೆ ನೆನಪಿಲ್ಲ. ನಾನು ಬರೆದು ನೀಡಿದ ಮಾಹಿತಿಯೇ ಬೇರೆ ಆಗಿತ್ತದೆ, ಹಾಗೂ ಪೊಲೀಸರು ಬೆರಳಚ್ಚು ಮಾಡಿರುವುದೇ ಬೇರೆಯಾಗಿರುತ್ತದೆ ಎಂದರೆ ಸರಿಯಲ್ಲ. ಚಾಸಾ **12** ನನ್ನ ಮೇಲಾಧಿಕಾರಿ ಎಂದರೆ ಸರಿ. ಅಂತೆಯೇ ಮಕ್ಕಳ ಕಲ್ಯಾಣ ಸಮಿತಿ ಬೆಳಗಾವಿ ಇವರು ಸಹ ನನ್ನ ಮೇಲಾಧಿಕಾರಿ ಎಂದರೆ ಸರಿ. ಮೇಲಾಧಿಕಾರಿಗಳ ಆದೇಶವನ್ನು ನಾವು ಪಾಲಿಸುತ್ತೇವೆ ಎಂದರೆ ಸರಿ. ನಾನು ದಿನಾಂಕ **13.07.2023**ಕ್ಕಿಂತ ಮೊದಲು ಸವದತ್ತಿ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದೇನು. ನಮ್ಮ

ಕಚೇರಿಯಲ್ಲಿ ಬಾಲ್ಯವಿವಾಹಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ವಹಿಯನ್ನು ನಿರ್ವಹಿಸುತ್ತಾರೆ ಎಂದರೆ ಸರಿ. ಅದನ್ನು ಪ್ರತ್ಯೇಕವಾಗಿ ಸಿಬ್ಬಂಧಿ ನೋಡಿಕೊಳ್ಳುತ್ತಾರೆ ಎಂದರೆ ಸರಿ. ಸದರಿ ವಹಿಯನ್ನು ಬಾಲ್ಯವಿವಾಹ ನಿಷೇಧ ಕಾರ್ಯಕ್ರಮಗಳ ಬಗ್ಗೆ ನಮೂದಿಸಿರುತ್ತಾರೆ ಎಂದರೆ ಸರಿ. ಅಂತೆಯೇ ಯಾವುದೇ ಬಾಲ್ಯವಿವಾಹ ಆದಲ್ಲಿ ಅವುಗಳನ್ನು ಸದರಿ ವಹಿಯಲ್ಲಿ ನಮೂದಿಸಲಾಗಿರುತ್ತದೆ ಎಂದರೆ ಸರಿ.

ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ಬೈಲಹೊಂಗಲ ಕಚೇರಿಯ ವಹಿಯಲ್ಲಿ ನಮೂದಿಸಿಸಲಾಗಿರುತ್ತದೆ. ಸದರಿ ವಹಿಯನ್ನು ತನಿಖೆಯ ಕಾಲಕ್ಕೆ ಪೊಲೀಸರಿಗೆ ನೀಡಿಲ್ಲ. ನನಗೆ ಪ್ರಕರಣದ ಮಾಹಿತಿಯು ದಿನಾಂಕ **05.08.2023** ರಂದು ಮಕ್ಕಳ ಕಲ್ಯಾಣ ಸಮಿತಿ ಬೆಳಗಾವಿಯಿಂದ ತಿಳಿದು ಬಂದಿರುತ್ತದೆ. ಅಂತೆಯೇ ದಿನಾಂಕ **03.03.2023** ರಂದು ಸಹ ಮಕ್ಕಳ ಕಲ್ಯಾಣ ಸಮಿತಿ ಬೆಳಗಾವಿಯವರು ಪತ್ರವನ್ನು ಕಳುಹಿಸಿರುತ್ತಾರೆ ಎಂದರೆ ಸರಿ. ಸದರಿ ಪತ್ರವನ್ನು ಪಡೆದುಕೊಂಡ ಬಳಿಕ ನಾವು ಯಾವುದೇ ವಿಚಾರಣೆಯನ್ನು ಮಾಡಿ ವರದಿಯನ್ನು ನೀಡಿಲ್ಲ. ಸದರಿ ಪತ್ರದ ಮೇಲೆ ಕಚೇರಿಯ ವಹಿಯಲ್ಲಿ ಷರಾ ಬರೆದಿರುವುದಿಲ್ಲ. ಮಕ್ಕಳ ಕಲ್ಯಾಣ ಸಮಿತಿ ಬೆಳಗಾವಿಯವರು ಚಾಸಾ **12** ರವರ ಮೇಲೆ ಒತ್ತಡ ನೀಡಿದ ಬಳಿಕ ದಿನಾಂಕ **05.08.2023** ರಂದು ನೆನಪೋಲೆಯನ್ನು ಸ್ವೀಕರಿಸಿದ ಬಳಿಕ ನಾವು ವರದಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿ. ಚಾಸಾ **12** ರವರು ನನಗೆ ಲಿಖಿತವಾಗಿ ಯಾವುದೇ ಆದೇಶವನ್ನು ನೀಡಿರುವುದಿಲ್ಲ ಎಂದರೆ ಸರಿ. ದಿನಾಂಕ **05.08.2023** ರಂದೇ ಮೌಖಿಕವಾಗಿ ಆದೇಶವನ್ನು ನೀಡಿರುತ್ತಾರೆ.

ನಾವು ಸಂಗೋಳ್ಳಿ ಗ್ರಾಮಕ್ಕೆ ಹೋಗಿ ಮೊದಲು ಅಂಗನವಾಡಿ ಕಾರ್ಯಕರ್ತೆಯರನ್ನು ಭೇಟ್ಟಿಯಾಗಿ ಅವರು ನನ್ನನ್ನು **1** ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಮನೆ ಯಾವ ಏರಿಯಾದಲ್ಲಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಆ ಕಾಲಕ್ಕೆ ಚಾಸಾ **4** ರವರು ಮನೆಯಲ್ಲಿ ಇರಲಿಲ್ಲ ಎಂದರೆ ಸರಿ. ಆರೋಪಿತರು ಚಾಸಾ **4** ರವರನ್ನು ತಾವು ತಮ್ಮ ಮನೆಗೆ ಕರೆದದುಕೊಂಡು ಬಂದಿರುವುದಿಲ್ಲ ಎಂದು ತಿಳಿಸಿರುತ್ತಾರೆ. ನಾವು ವಿಚಾರಣೆಗೆ ಹೋದಾಗ ಆರೊಪಿತರಿಂದ **1** ನೇ ಆರೋಪಿಯ ಹಾಗೂ ಚಾಸಾ **4** ರವರ ವಯಸ್ಸನ್ನು ಖಾತ್ರಿಪಡಿಸಿಕೊಳ್ಳಲು ಯಾವುದೇ ದಾಖಲೆಯನ್ನು ತೆಗೆದುಕೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ಮಕ್ಕಳ ಕಲ್ಯಾಣ ಸಮಿತಿ ರವರಿಂದ ಸೂಕ್ತ ದಾಖಲೆಗಳನ್ನು ಈ ಮುಂಚಿತವಾಗಿಯೇ ಕಳುಹಿಸಿಕೊಟ್ಟಿರುತ್ತಾರೆ. ನಾನು ದೂರನ್ನು ನೀಡುವ ಮುಂಚಿತವಾಗಿ ಚಾಸಾ **4** ರವರ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

ದಿನಾಂಕ **02.03.2023** ರಿಂದ **06.04.2023** ವರೆಗೆ ಚಾಸಾ **4** ರವರು ಮಕ್ಕಳ ಕಲ್ಯಾಣ ಸಮಿತಿ ಬೆಳಗಾವಿಯಲ್ಲಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ನಾನು ಆಗಲೀ ನಮ್ಮ ಮೇಲಾಧಿಕಾರಿಯಾಗಲೀ, ಅಥವಾ ಸಂಬಂಧಪಟ್ಟ ಅಧಿಕಾರಿಯಾಗಲೀ ಅಲ್ಲಿ ಖುದ್ದಾಗಿ ಹೋಗಿರುವುದಿಲ್ಲ. ಮದುವೆಯಾದ ತಕ್ಷಣವೇ ಚಾಸಾ **12** ರವರಿಗೆ ದೂರನ್ನು ನೀಡಲು ಯಾವುದೇ ತೊಂದರೆ ಇದ್ದ ಬಗ್ಗೆ ನನಗೆ ಮಾಹಿತಿ ಇಲ್ಲ. ಬಾಲ್ಯವಿವಾಹವಾದ **6** ತಿಂಗಳ ಬಳಿಕ ದೂರನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ವಿಳಂಬದ ಬಗ್ಗೆ ದೂರಿನಲ್ಲಿ ಯಾವುದೇ ಸೂಕ್ತ ಕಾರಣಗಳನ್ನು ನೀಡಿರುವುದಿಲ್ಲ ಎಂದರೆ ಸರಿ. ಸಂಗೋಳ್ಳಿ ಗ್ರಾಮ ಹಾಗೂ ಚಚಡಿ ಗ್ರಾಮಸ್ಥರು ಸಹ ಯಾರು ಬಾಲ್ಯವಿವಾಹದ ಬಗ್ಗೆ ನಮ್ಮ ಇಲಾಖೆಗೆ ದೂರನ್ನು ನೀಡಿರುವುದಿಲ್ಲ. ಸಂಗೋಳ್ಳಿಯಲ್ಲಿ **5** ಅಂಗನವಾಡಿ ಕೇಂದ್ರಗಳಿವೆ, ಅಂಗನವಾಡಿ ಕಾರ್ಯಕರ್ತೆಯರು ಸಹ ಯಾವುದೇ ದೂರನ್ನು ನೀಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಸಂಗೋಳ್ಳಿಯಲ್ಲಿ ತಲಾಟಿ ಹಾಗೂ ಪಂಚಾಯತಿಯವರು ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ದೂರನ್ನು ನೀಡಿರುವುದಿಲ್ಲ. **1** ನೇ ಆರೋಪಿಯ ಮನೆಯಲ್ಲಿ ಅವರ ತಂದೆ ತಾಯಿ ಇರುವ ಬಗ್ಗೆ ಮಾಹಿತಿ ತಿಳಿಸಿರುತ್ತಾರೆ. ಚಾಸಾ **4** ರವರೊಂದಿಗೆ **1** ನೇ ಆರೋಪಿ ಮದುವೆಯಾದ ಬಗ್ಗೆ ಅಕ್ಕಪಕ್ಕದ ಮನೆಯವರನ್ನು ವಿಚಾರಣೆ ಮಾಡಿರುವುದಿಲ್ಲ.

ಮದುವೆಯ ಕಾಲಕ್ಕೆ ಅರಿಶಿಣ ಶಾಸ್ತ್ರ, ಸುರಗಿ ಶಾಸ್ತ್ರ ಹಾಗೂ ಇತರ ಶಾಸ್ತ್ರಗಳನ್ನು ಮಾಡಲಾಗುತ್ತದೆ ಎಂದರೆ ಸರಿ. ಈ ಎಲ್ಲಾ ಶಾಸ್ತ್ರಗಳನ್ನು ಮಾಡಿರುವ ಬಗ್ಗೆ ಯಾರನ್ನು ವಿಚಾರಣೆ ಮಾಡಿರುವುದಿಲ್ಲ. ಚಾಸಾ **12**ರವರ ಮೇಲೆ ಒತ್ತಡ ಹೇರಿದ್ದ ಮೇರೆಗೆ ನಾನು ಸಂಗೋಳ್ಳಿ ಗ್ರಾಮಕ್ಕೆ ಹೋಗಿ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ **12** ರವರಿಗೆ ನಾನು ದೂರು ದಾಖಲಿಸುವ ಬಗ್ಗೆ ತೋರಿಸುವ ಉದ್ದೇಶದಿಂದ ಸುಳ್ಳು ದೂರನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಪಂಚನಾಮೆಯ ಕಾಲಕ್ಕೆ ಚಾಸಾ **2** ಮತ್ತು **3** ರವರು ಹಾಜರಿದ್ದರು. ಚಾಸಾ **4** ರವರ ತಂದೆ ತಾಯಿ ಸಹ ಇದ್ದರು. ಪಂಚನಾಮೆಯ ಕಾಲಕ್ಕೆ ನಾನು ಮದುವೆಯಾದ ಸ್ಥಳವನ್ನು ತೋರಿಸಿರುತ್ತೇನೆ. ಪಂಚನಾಮೆಯನ್ನು ಪೊಲೀಸರೆ ಬರೆದುಕೊಂಡರು. ಅದರಲ್ಲಿ ಬರೆದಿರುವ ಅಂಶಗಳನ್ನು ನನಗೆ ಓದಿ ತಿಳಿಸಿರುತ್ತಾರೆ. ನಮ್ಮ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ಘಟನಾ ಸ್ಥಳದ ಚೆಕಬಂಧಿ ಹೇಳಲಾಗುವುದಿಲ್ಲ. ದೂರಿನಲ್ಲಿ ಮದುವೆ **1** ನೇ ಆರೋಪಿಯ ಮನೆಯ ಮುಂದೆ ಆಗಿರುತ್ತದೆ ಎಂದು ಹೇಳಿ ಬರೆಸಿರುತ್ತೇನೆ. ಪಂಚನಾಮೆಯಲ್ಲಿ ಮನೆಯ ಹಿಂದೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಆರೊಪಿಯ ಮನೆಯ ಮುಂದೆ ಮದುವೆಯಾಗಿರುತ್ತದೆ.

ಪಂಚನಾಮೆಯ ಕಾಲಕ್ಕೆ ನಾನು ಮನೆಯ ಮುಂದೆ ಎಂದು ತಿಳಿಸಿರುತ್ತೇನೆ. ದಿನಾಂಕ 09.08.2023 ರ ಬಳಿಕ ನನ್ನನ್ನು ಪೊಲೀಸರು ನನ್ನನ್ನು ಎಂದಿಗೂ ಪೊಲೀಸ ಠಾಣೆಗೆ ಕರೆಯಿಸಿ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಚಾಸಾ 12 ರವರು ಹಾಗೂ ಮಕ್ಕಳ ಕಲ್ಯಾಣ ಸಮಿತಿಯವರು ಘಟನಾ ಸ್ಥಳಕ್ಕೆ ಭೇಟ್ಟಿ ನೀಡಿರುತ್ತಾರೆ ಇಲ್ಲವೋ ಎಂದು ನನಗೆ ಗೊತ್ತಿಲ್ಲ.

ನಾನು ಸಂಗೋಳ್ಳಿ ಗ್ರಾಮಕ್ಕೆ ಪ್ರಕರಣದ ಬಗ್ಗೆ ಯಾವುದೇ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಬಾಲ್ಯವಿವಾಹವಾಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಹಾಗೂ ಚಾಸಾ 4 ರವರ ನಡುವೆ ಯಾವುದೇ ವಿವಾಹವಾಗಿರುವುದಿಲ್ಲ ಎಂದರೆ ಸರಿಯಲ್ಲ. ಇಲ್ಲಿಯವರೆಗೆ ಚಾಸಾ 4ರವರು ಅವರ ತಂದೆ ತಾಯಿಯೊಂದಿಗೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮೇಲಾಧಿಕಾರಿಗೆ ತೋರಿಸುವ ವಿಚಾರವಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**4 ಮತ್ತು 5 ನೇ ಆರೋಪಿತರ ಪರ ವಕೀಲರು 1 ರಿಂದ 3 ನೇ ಆರೋಪಿತರ ಪರ ವಕೀಲರ ವಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.**

**ಮರುವಿಚಾರಣೆ ಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ. ಮತ್ತು ಪ್ರ.ದ.ನ್ಯಾ..ದಂ.ನ್ಯಾ..ಬೈಲಹೊಂಗಲ